ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನೆ ಉಪ ವಿಭಾಗ
ನಾಗಮಂಗಲ
Telephone No: 9448994906

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Sub Division, TB Extention
Nagamangala
Web Site:cescmysore.karnataka.gov.in
E-mail ID: aeengl@cescmysore.org

Company Identity Number[CIN]:- U40109KA2004SGC035177

ಪ.ಸಂ: ಸಕಾಇಂ(ವಿ)/ಹಿಸ/ಸೆಸ್ಕ್/ನಾ/2023-24/4797 ದಿನಾಂಕ: 30.09.2023

**ದಿನಾಂಕ: 30.09.2023 ರಂದು**
**ಸಮಯ ಬೆಳಗ್ಗೆ 11:00 ಗಂಟೆಗೆ ನಾಗಮಂಗಲ ವಿಭಾಗ ಕಛೇರಿ ಸಭಾಂಗಣದಲ್ಲಿ ನಡೆದ ನಾಗಮಂಗಲ ಉಪವಿಭಾಗದ**
**2 ನೇ ತ್ರೈ ಮಾಸಿಕ ಜನ ಸಂಪರ್ಕ ಸಭೆಯ**

~*~*~*~*~*~*~

**ಸಭೆಗೆ ಹಾಜರಿದ್ದ ಅಧಿಕಾರಿಗಳು:-**

1 ಶ್ರೀ ರಘು. ಕೆ. ಎಸ್. ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ನಾಗಮಂಗಲ ವಿಭಾಗ
2 ಶ್ರೀ ನಾಗರಾಜ ಹೆಚ್. ಲೆಕ್ಕಾಧಿಕಾರಿಗಳು, ನಾಗಮಂಗಲ ವಿಭಾಗ
3 ಶ್ರೀ ಸತೀಶ.ಎನ್. ಪ್ರ ಕಿರಿಯ ಇಂಜಿನಿಯರ್ (ತಾಂತ್ರಿಕ), ನಾಗಮಂಗಲ ವಿಭಾಗ
4 ಶ್ರೀ ಆನಂದ ಟಿ.ಹೆಚ್. ಪ್ರಭಾರ ಸಹಾಯಕ ಇಂಜಿನಿಯರ್ (ವಿ), ಕಾ & ಪಾ ಘಟಕ, ನಾಗಮಂಗಲ
5 ಶ್ರೀ ಬೀರಪ್ಪ, ಕಿರಿಯ ಇಂಜಿನಿಯರ್ (ವಿ), ದೇವಲಾಪುರ ಶಾಖೆ. ನಾಗಮಂಗಲ ಉಪ ವಿಭಾಗ
6 ಕುಮಾರಿ ಲಕ್ಷ್ಮೀ ಕೆ ಕಿರಿಯ ಇಂಜಿನಿಯರ್ (ವಿ), ಚೀಣ್ಯ ಶಾಖೆ. ನಾಗಮಂಗಲ ಉಪ ವಿಭಾಗ

ದಿನಾಂಕ:-30.09.2023 ಶನಿವಾರ ಸಮಯ 11.00 ಗಂಟೆಗೆ ನಾಗಮಂಗಲ ವಿಭಾಗ ಕಛೇರಿಯ ಸಭಾಂಗಣದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್) ರವರ ಸಭೆಯ ಅಧ್ಯಕ್ಷತೆಯಲ್ಲಿ ಹಾಗೂ ಈ ಕೆಳಕಂಡಂತೆ ಹಾಜರಿದ್ದ ಅಧಿಕಾರಿಗಳು ಹಾಗೂ ಗ್ರಾಹಕರುಗಳ/ದೂರುದಾರರ ಸಮ್ಮುಖದಲ್ಲಿ ಜನ ಸಂಪರ್ಕ ಸಭೆಯನ್ನು ನಡೆಸಲಾಯಿತು.

ಕುಮಾರಿ ಲಕ್ಷ್ಮೀ ಕೆ, ಕಿ.ಇಂ(ವಿ) ರವರ ಪ್ರಾರ್ಥನೆಯೊಂದಿಗೆ ಜನ ಸಂಪರ್ಕ ಸಭೆಯು ಆರಂಭವಾಯಿತು. ಶ್ರೀ ನಾಗರಾಜು ಹೆಚ್. ಲೆಕ್ಕಾಧಿಕಾರಿಗಳು ರವರು ಸಭೆಗೆ ಬಂದ ಅಧಿಕಾರಿ ವರ್ಗದವರನ್ನು ಹಾಗೂ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ 3 ತಿಂಗಳಿಗೆ ಒಮ್ಮೆ ಜನ ಸಂಪರ್ಕ ಸಭೆಯನ್ನು ಕಾರ್ಯ ನಿರ್ವಾಹಕ ಇಂಜಿನಿಯರ್(ವಿದ್ಯುತ್) ರವರ ಅಧ್ಯಕ್ಷತೆಯಲ್ಲಿ ನಡೆಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಜಕಾತಿ ಆದೇಶ-2019 ರಲ್ಲಿ ಆದೇಶವಾಗಿರುತ್ತದೆ. ನಾಗಮಂಗಲ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ ಅಥವಾ ಲಿಖಿತವಾಗಿ ಸಲ್ಲಿಸಿ, ವಿದ್ಯುತ್‌ಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಂತೆ ವಿದ್ಯುತ್ ಗ್ರಾಹಕರಲ್ಲಿ, ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ರಘು ಕೆ.ಎಸ್, ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್), ನಾಗಮಂಗಲರವರು ತಿಳಿಸಿದರು ಮತ್ತು ಮೇ-23 ರಂದು ನಡೆದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ದೂರುಗಳ ಬಗ್ಗೆ ಹಾಗು ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಸಭೆಗೆ ವಿವರಿಸಿದರು

1 **ಶ್ರೀ ಮಂಜುನಾಥ ಕೆ, ಖರಡ್ಯ, ಚೀಣ್ಯ ಶಾಖೆ ಮೊಬೈಲ್ ನಂ:-9900535992**

**ದೂರು:- ಅರ್ಜಿದಾರರ ಕೃಷಿ ಪಂಪ್ ಸೆಟ್ ಲೈನ್ ಮಾರ್ಗದ ಗೈ ಕಿತ್ತು ಹೋಗಿ ವೈರುಗಳು ನೇತಾಡುತ್ತಿದ್ದು ಗೈ ಸರಿಪಡಿಸಲು ಅಳವಡಿಸಲು ಕೋರಿದರು.**

ಕ್ರಮ:- ಕಾ.ಇಂ(ವಿ) ರವರು ಮಾತನಾಡಿ ಶಾಖಾಧಿಕಾರಿಗಳು, ಚೀಣ್ಯ ಶಾಖೆ ರವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ಕಿತ್ತು ಹೋಗಿರುವ ಗೈ ಸರಿಪಡಿಸುವಂತೆ ಸೂಚಿಸಿದರು.

2 **ಶ್ರೀ ಬೆಟ್ಟೇಗೌಡ, ಬೈರನಹಳ್ಳಿ, ನಾಗಮಂಗಲ ಶಾಖೆ ಮೊಬೈಲ್ ನಂ:-9901599926**

**ದೂರು:- ಅರ್ಜಿದಾರರ ಕೃಷಿ ಪಂಪ್ ಸೆಟ್ ಲೈನ್ ಬಳಿಯಲ್ಲಿ ಜೋತು ಬಿದ್ದಿರುವ ಎಲ್.ಟಿ ಮಾರ್ಗವನ್ನು ಬಿಗಿಗೊಳಿಸುವಂತೆ ಕೋರಿದರು.**

ಕ್ರಮ:- ಕಾ.ಇಂ(ವಿ) ರವರು ಮಾತನಾಡಿ ಶಾಖಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ಘಟಕ, ನಾಗಮಂಗಲ ರವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ಜೋತು ಬಿದ್ದಿರುವ ಎಲ್.ಟಿ ಮಾರ್ಗವನ್ನು ಬಿಗಿಗೊಳಿಸುವಂತೆ ಸೂಚಿಸಿದರು.

CamScanner

3 **ಶ್ರೀ ಜಯಶಂಕರ್, ಮುಳಕಟ್ಟೆ, ನಾಗಮಂಗಲ ಶಾಖೆ ಮೊಬೈಲ್ ನಂ:-9900714555**

**ದೂರು:- ಅರ್ಜಿದಾರರು ಕೃಷಿ ಪಂಪ್ ಸೆಟ್ ಲೈನ್ ಭೂಮಿಯಿಂದ 10 ಅಡಿ ಅಂತರದಲ್ಲಿ ಜೋತು ಬಿದ್ದಿರುವುದರಿಂದ ಮಧ್ಯವರ್ತಿ ಕಂಬವನ್ನು ಅಳವಡಿಸಲು ಕೋರಿದರು.**

ಕ್ರಮ:- ಕಾ.ಇಂ(ವಿ) ರವರು ಮಾತನಾಡಿ ಶಾಖಾಧಿಕಾರಿಗಳು, ನಾಗಮಂಗಲ ಶಾಖೆ ರವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಎಲ್.ಟಿ ಮಾರ್ಗಕ್ಕೆ ಮಧ್ಯಂತರ ಕಂಬವನ್ನು ಅಳವಡಿಸುವಂತೆ ಸೂಚಿಸಿದರು.

4 **ಶ್ರೀ ಪ್ರತಾಪ, ದಂಡಿಗನಹಳ್ಳಿ, ದೇವಲಾಪುರ ಶಾಖೆ ಮೊಬೈಲ್ ನಂ:-9880438557**

**ದೂರು:- ಅರ್ಜಿದಾರರು ಕೃಷಿ ಪಂಪ್ ಸೆಟ್ ಲೈನ್ ಭೂಮಿಯಿಂದ 10 ಅಡಿ ಅಂತರದಲ್ಲಿ ಜೋತು ಬಿದ್ದಿರುವುದರಿಂದ ಮಧ್ಯವರ್ತಿ ಕಂಬವನ್ನು ಅಳವಡಿಸಲು ಕೋರಿದರು.**

ಕ್ರಮ:- ಕಾ.ಇಂ(ವಿ) ರವರು ಮಾತನಾಡಿ ಶಾಖಾಧಿಕಾರಿಗಳು, ದೇವಲಾಪುರ ಶಾಖೆ ರವರಿಗೆ ಕೂಡಲೇ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಎಲ್.ಟಿ ಮಾರ್ಗಕ್ಕೆ ಮಧ್ಯಂತರ ಕಂಬವನ್ನು ಅಳವಡಿಸುವಂತೆ ಸೂಚಿಸಿದರು.

ಮೇಲ್ಕಂಡ ದೂರುಗಳು ಮುಂದಿನ ಜನಸಂಪರ್ಕ ಸಭೆಯಲ್ಲಿ ಅನುಸರಣಾ ವರದಿಯೊಂದಿಗೆ ನಿವಾರಣೆಯಾಗಿರುವುದಾಗಿ ಸಭೆಯ ಅಧ್ಯಕ್ಷತೆ ವಹಿಸಿರುವ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ರವರು ತಿಳಿಸಿದರು.

ನಂತರ ಶ್ರೀ ಬೀರಪ್ಪ, ಕಿ.ಇಂ(ವಿ)ರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

- **ದೂರನ್ನು ನೀಡಿದ ಗ್ರಾಹಕರ ಸಂಖ್ಯೆ – 4**
- **ಒಟ್ಟು ದೂರು/ಸಮಸ್ಯೆಗಳು – 4**
- **ನಿವಾರಣೆಯಾದ ದೂರು/ಸಮಸ್ಯೆಗಳು – 4**

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),**
**ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪವಿಭಾಗ,**
**ನಾಗಮಂಗಲ.**

<u>ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.</u>

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ ಮಂಡ್ಯರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ ನಾಗಮಂಗಲ.
3. ಲೆಕ್ಕಾಧಿಕಾರಿ,(ಆಂಪ), ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
4. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
5. ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),ಕಛೇರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ ನಾಗಮಂಗಲ.
6. ಶಾಖಾಧಿಕಾರಿಗಳು, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಘಟಕ ನಾಗಮಮಗಲ/ದೇವಲಾಪುರ/ಚಿಣ್ಯ.
7. ಕಿಆಸ/ಮು.ಕ



CamScanner